responsibility. ಆದ್ದರಿಂದ, ನೀವು ಆ ರೀತಿಯಾಗಿ ಕೊಡಬೇಕಾಗುತ್ತದೆ. ಆದರೆ, ಇದನ್ನು ಕೊಡದೆ ನೀವು ವಿಫಲರಾಗಿದ್ದೀರಿ. ನೀವು ಹೇಳಿ ಈಗಾಗಲೇ 7 ತಿಂಗಳಾಗಿದೆ. ಮೇ ತಿಂಗಳಲ್ಲಿ ನೋಟಿಸ್ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಈ ನಡುವೆ ಅವರನ್ನು ಕರೆದು ಮಾತನಾಡಬೇಕಾಗಿತ್ತು. ಹಾಗೆಯೇ ನೋಟಿಸ್ ಕೊಟ್ಟು ಸಕ್ಕರೆಯನ್ನು ಜಪ್ತಿ ಮಾಡಿ ಫ್ಯಾಕ್ಟರಿಗಳನ್ನು ಬಂದ್ ಮಾಡಬೇಕಾಗಿತ್ತು. Central Government ನ FRP ಪ್ರಕಾರವಾದರು ನೀವು ರಿಕವರಿ ಮಾಡಿ ಕೊಡಬೆಕಾಗಿತ್ತೆಂದು ಮೇ ತಿಂಗಳ 22ನೇ ತಾರೀಖಿನ ದಿವಸ ಕೋರ್ಟ್‌ನಲ್ಲಿ ಆರ್ಡರ್ ಆಗಿದೆ. ಆದರೆ, ಈ ಕೆಲಸವನ್ನು ನೀವು ಮಾಡಲಿಲ್ಲ. ಇದಾದ ಮೇಲೆ ಒಂದು ವಾರ ಬಿಟ್ಟು ಅಂದರೆ, ಆ ತಿಂಗಳ ಕೊನೆಯಲ್ಲಿ ನೀವು ನೋಟಿಸ್ ಕೊಟ್ಟಿದ್ದೀರಿ. ನೋಟಿಸ್ ಕೊಟ್ಟು ಒಂದು ವಾರ ಆದ ಮೇಲೆ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ನೀವು ಮತ್ತೆ ಫ್ಯಾಕ್ಟರಿ ಮಾಲೀಕರನ್ನು ಏಕೆ ಕರೆಯಬೇಕಾಗಿತ್ತು? ಅವರ ಜೊತೆ ಏಕೆ ಮಾತನಾಡಬೇಕಾಗಿತ್ತು? ಅವರನ್ನು ಕರೆದು ಮಾತನಾಡಿದ ಮೇಲೆ ಉಳಿದ ಮೊತ್ತದ ಪೇಮೆಂಟ್ ಮಾಡಬೇಕಾಗಿತ್ತು. ಆದರೆ, ಈ ಕೆಲಸವನ್ನು ನೀವು ಮಾಡಲಿಲ್ಲ. ಅಂದರೆ, ಅವರಿಗೆ ಎಲ್ಲಾ ದಾರಿಯನ್ನು ನೀವು ಬಹಳ ಸರಳವಾಗಿ ಹೇಳಿಕೊಂಡುತ್ತಿದ್ದಿರಿ. ಇಲ್ಲಿ ರೈತರಿಗೆ ಅನ್ಯಾಯವಾಗುತ್ತಿದೆ. ಇವತ್ತಿನ ದಿವಸ ಸರ್ಕಾರ ಶುಗರ್ ಫ್ಯಾಕ್ಟರಿ ಮಾಲೀಕರಿಗೆ ಸಹಾಯ, ಅನುಕೂಲ ಮಾಡುವ ಸಲುವಾಗಿ ಶುಗರ್ ಲಾಬಿಗೆ ಸರ್ಕಾರದವರು field ಆಗಿ ರೈತರಿಗೆ ಅನ್ಯಾಯ ಮಾಡುತ್ತಿದ್ದೀರಿ. ಇದನ್ನು ನಾವು protest ಮಾಡುತ್ತಿದ್ದೇವೆ. ಇವತ್ತಿನ ದಿವಸ ರೈತರು ಬೀದಿಗೆ ಬಿದ್ದಿದ್ದಾರೆ ಹಾಗೆಯೇ ಈ ಬಗ್ಗೆ ನಾವೂ ಕೂಡ protest ಮಾಡುತ್ತೇವೆ. ಎಲ್ಲಿಯವರೆಗೆ ಈ ಬಗ್ಗೆ ನೀವು ಸ್ಪಷ್ಟವಾದ ನಿಲುವನ್ನು ಹೇಳುವುದಿಲ್ಲವೋ ಅಲ್ಲಿಯವರೆಗೆ ನಾವು ಬಿಡುವುದಿಲ್ಲ. ನಾವು ಈ ಬಗ್ಗೆ protest ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು.)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನಾವು ಆ ರೀತಿಯಾಗಿ ಕಾರ್ಖಾನೆಯವರ ಜೊತೆಯಲ್ಲಿ ಶಾಮೀಲಾಗುವ ಪರಿಸ್ಥಿತಿ ಇದ್ದರೆ 2500 ರೂಪಾಯಿಯನ್ನು ನಾವು ನಿಗದಿ ಮಾಡುವುದಕ್ಕೆ ಹೋಗುತ್ತಿರಲಿಲ್ಲ. FRP ಪ್ರಕಾರ ಪೇಮೆಂಟ್ ಮಾಡಿ ಎಂದು ಹೇಳಿ ಸುಮ್ಮನೆ ಇರುತ್ತಿದ್ದೆವು. ನಮ್ಮ ಸರ್ಕಾರಕ್ಕೆ ಜವಾಬ್ದಾರಿ ಇದ್ದ ಪ್ರಯುಕ್ತ ರೈತರಿಗೆ ಒಳ್ಳೆಯ ಬೆಲೆ ಸಿಗಲೆಂಬ ಉದ್ದೇಶದಿಂದ 100 ರೂಪಾಯಿ tax exemption ಕೊಟ್ಟಿದ್ದೇವೆ. ಅದನ್ನೂ ಕೂಡ ಹೆಚ್ಚುವರಿಯಾಗಿ ಕೊಡಬೇಕೆಂದು ಎಲ್ಲಾ ಫ್ಯಾಕ್ಟರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಫ್ಯಾಕ್ಟರಿಯವರು ಮತ್ತೆ ಕೋರ್ಟ್‌ಗೆ ಹೋಗಬಾರದೆಂಬ ಕಾರಣಕ್ಕೆ FRP ಪ್ರಕಾರ ಕೊಡಬೇಕೆಂದು 18 ಕಾರ್ಖಾನೆಗಳಿಗೆ recovery ಮಾಡುವುದಕ್ಕೆ notice ಅನ್ನು issue ಮಾಡಿದ್ದೇವೆ. ಇದರ ಜೊತೆಗೆ ಒಂದು ton ಗೆ 100